

# ನೊಂದವರಿಗೆ ಸಾಂತ್ವನ

**ಕಾರ್ಪೊರೇಟ್ ಉದ್ಯೋಗಿ ರಾಕೇಶ್ (Pal Rakesh) ಹೀಯಾಳಿಕೆಯ ದೌರ್ಜನ್ಯದಿಂದ ಪುಟಿದೆದ್ದು ರೀಲ್ಸ್ ಮೂಲಕ ಜಾಗೃತಿಯನ್ನು ಮೂಡಿಸಿದ್ದಾರೆ.**

■ ನಿರೂಪಣೆ: **ರಾಘವೇಂದ್ರ ತೊಗರ್ಸಿ**

ಬೆಂಗಳೂರಿನಲ್ಲಿಯೇ ಹುಟ್ಟಿ ಬೆಳೆದೆ. ಓದಿನ ಮಧ್ಯದಲ್ಲಿ ಓದಿಗೆ ವಿರಾಮ ಹೇಳಿ ಕಾರ್ಪೊರೇಟ್ ಜಗತ್ತಿಗೆ ಪ್ರವೇಶ ಮಾಡಿದೆ. ಸಂಪಾದಿಸಿ ಮತ್ತೆ ಶಿಕ್ಷಣವನ್ನು ಮುಂದುವರಿಸಿದೆ. ಎಂಜಿನಿಯರಿಂಗ್ ಮಾಡಿದ್ದರೂ ಏನು ಓದಿದ್ದೇನೆ ಎನ್ನುವುದನ್ನು ಹೇಳುವ ಇಚ್ಛೆ ಇಲ್ಲ. ಈ ಶೈಕ್ಷಣಿಕ ಪದ್ಧತಿಯೇ ಇಷ್ಟ ಆಗಲ್ಲ. ನಮ್ಮ ಓದು ಹೇಗಿದೆ ಅಂದರೆ, ಚಾಕೊಲೇಟ್ ಬೇಕಾ ಐಸ್‌ಕ್ರೀಂ ಬೇಕಾ ಎಂದು ಒಂದು ಮಗುವಿಗೆ ಕೇಳಿ ಒಂದನ್ನು ಆಯ್ಕೆ ಮಾಡುವ ಅವಕಾಶ ಕೊಡುತ್ತದೆ. ಐಸ್‌ಕ್ರೀಂ ಅಂಗಡಿ ದೂರ ಇದ್ದು ಚಾಕೊಲೇಟ್ ಸುಲಭಕ್ಕೆ ಸಿಗುತ್ತದೆ. ಆಗ ಮಗುವಿಗೆ ಐಸ್‌ಕ್ರೀಂ ತಿಂದರೆ ಶೀತ ಆಗುತ್ತದೆ. ಆರೋಗ್ಯಕ್ಕೆ ಒಳ್ಳೆಯದನ್ನು ಆಯ್ಕೆ ಮಾಡು ಎನ್ನುತ್ತದೆ ವ್ಯವಸ್ಥೆ. ಪೂರ್ವನಿರ್ಧರಿತವನ್ನು ಹೇರಲು ಮಗುವಿಗೆ ಆಯ್ಕೆಯ ಆಮಿಷವನ್ನು ತೋರಿಸುತ್ತೇವೆ.

ಬೇರೆ ಬೇರೆ ಕಂಪನಿಗಳಲ್ಲಿ ಪ್ರಮುಖ ಸ್ಥಾನದಲ್ಲಿ ಕೆಲಸವನ್ನು ನಿರ್ವಹಿಸಿದ್ದೆ. ಸಾಕಷ್ಟು ಕಂಪನಿಗಳನ್ನು ಬದಲಿಸಿದೆ. ಅದಕ್ಕೆ ಕಾರಣವನ್ನು ಹುಡುಕಿದಾಗ ಉತ್ತರವೂ ಸಿಕ್ಕಿತು. ಒಂದು ಸಂಸ್ಥೆಯಲ್ಲಿ ಮ್ಯಾನೇಜರಿಗೆ ವರದಿ ಮಾಡಿಕೊಳ್ಳಬೇಕಿತ್ತು. ಅವರು ನನ್ನ ಬಗ್ಗೆ ಅಪಪ್ರಚಾರ ಶುರುಮಾಡಿದರು. 'ರಾಕೇಶನಿಗೆ ನೆನಪಿರುವುದಿಲ್ಲ. ಆತ ಕಿವುಡ' ಎಂಬ ಸುದ್ದಿ ಹಬ್ಬಿಸುತ್ತಿದ್ದರು. ವಾಸ್ತವದಲ್ಲಿ ನನ್ನ ಎರಡೂ ಕಿವಿಗಳಿಗೆ ಶಬ್ದಗ್ರಹಣ ಶಕ್ತಿ ಕಡಿಮೆ ಇದೆ. ಬಲಭಾಗದ ಕಿವಿಗೆ ಶಸ್ತ್ರಚಿಕಿತ್ಸೆ ಮಾಡಿಸಿದ್ದೇನೆ. ಎಡಗಿವಿ ಈಗಲೂ ಹಾಗೆಯೇ ಇದೆ. ಏರ್‌ಡ್ರಮ್ ಬಳಿಯ ಚಿಕ್ಕ ಮೂಳೆ ಕಂಪಿಸದಿರುವುದು ನನಗೆ ಸಮಸ್ಯೆ. ಈಗಲೂ ಎಡಗಿವಿ ಸ್ಪಷ್ಟವಾಗಿ ಕೇಳಿಸುವುದಿಲ್ಲ.

'ರಾಕೇಶ್' ಎಂದು ಜೋರಾಗಿ ಕೂಗುವುದು, ತಿರುಗಿ ನೋಡಿದರೆ ಸುಮ್ಮನೆ ಇರುತ್ತಿದ್ದರು. ಹೀಗೆ ಕಿಂಡಲ್ ಮಾಡುತ್ತಿದ್ದರು. ಕಚೇರಿಯಲ್ಲಿ ಹಾಸ್ಯಾಸ್ಪದ ವ್ಯಕ್ತಿಯನ್ನಾಗಿ ಮಾಡಿದ್ದರು. ಪ್ರತಿರೋಧದ ಪ್ರಯತ್ನವೂ ಫಲಪ್ರದ ಆಗಲಿಲ್ಲ. ಗ್ರಾಹಕರಂತೆ ಫೇಕ್ ಫೋನ್ ಮಾಡಿ ಕಿರಿಕಿರಿ ಉಂಟು ಮಾಡುತ್ತಿದ್ದರು. ತಕ್ಷಣ ಬೇರೆ ಕಂಪನಿಗೆ ಹೋಗುತ್ತೇನೆ. ಇಂತಹದ್ದೇ ಏನೇನೋ ಕಿರಿಕಿರಿಗೆ ಬೇಸತ್ತು ಏಳೆಂಟು ಕಂಪನಿ ಬದಲಿಸುತ್ತೇನೆ. ಎಲ್ಲ ಕಡೆ ಏನೇನೋ ಕಿರಿಕಿರಿಯ ವಾತಾವರಣ. ರಜೆ ಬೇಕು ಅಂದಾಗ ಸರಿಯಾಗಿ ಸಿಗುತ್ತಿರಲಿಲ್ಲ. ಕೆಲವರಿಗೆ ಮಾತ್ರ ನಿರಂತರವಾಗಿ ಸಿಗುತ್ತಿತ್ತು. ಕೆಲಸ ನನ್ನ ನೆಮ್ಮದಿಯನ್ನು ಕಿತ್ತುಕೊಳ್ಳುತ್ತಿದೆ ಎಂದು ಗೊತ್ತಾಯಿತು. ಅವಮಾನ ಅನುಭವಿಸಿ ಇಂತಹ ಕೆಲಸ ಮಾಡುವುದು ಬೇಡ ಎಂದು ಕೆಲಸ ಬಿಟ್ಟು ಬಂದೆ. ಮನೆಗೆ ಬಂದು ವಿಷಯ ಹೇಳಿದರೆ, ಮನೆಯಲ್ಲೂ ವಿರೋಧ. ಎಲ್ಲ ನನ್ನನ್ನು ಚಿಕ್ಕ ಮಗುವಿನಂತೆ ನೋಡಿದರು. ಕೋಣೆಯನ್ನು ಸೇರಿಕೊಂಡೆ. ತಿನ್ನುವುದು ಮಲಗುವುದನ್ನು ಬಿಟ್ಟು ಬೇರೆ ಏನೂ ಮಾಡಲಿಲ್ಲ. ಅಷ್ಟರಲ್ಲಿ ನನ್ನ ಮಗಳಿಗೆ ಒಂದು ವರ್ಷ ತುಂಬಿತ್ತು. ಸುಮಾರು ಏಳು ತಿಂಗಳು ಗೃಹಬಂಧನದಲ್ಲೇ ಕಳೆದೆ. ಬದುಕಿನ ಜೈವಿಕ ಗಡಿಯಾರವೂ ಹಳಿ ತಪ್ಪಿತ್ತು. ದೇಹದ ತೂಕ ನೂರರ ಗಡಿ ದಾಟಿತ್ತು. ರೂಮಿನಿಂದ ಆಚೆ ಬರಬೇಕು ಎಂದೆನಿಸಿತು.

ಕಾರು ಓಡಿಸುವುದು ದುಬಾರಿ ಎಂದು ಸೈಕಲ್ ಓಡಿಸಲು ಶುರುಮಾಡಿದೆ. ದುಡ್ಡು ಖಾಲಿ ಆಯಿತು. ಕಾರನ್ನು ಮಾರಿದೆ. ಒಂದು ರೀತಿಯ ಅಧ್ಯಾತ್ಮ ಮಾರ್ಗವನ್ನು ಹಿಡಿದೆ. ಮನೆಯವರ ಒತ್ತಡವನ್ನು ಲೆಕ್ಕಿಸದೆ ಜಿಮ್‌ನಲ್ಲಿ ಸಹಾಯಕ ತರಬೇತಿದಾರನಾಗಿ ಕೆಲಸ ಆರಂಭಿಸಿದೆ. ಸಂಬಳ ಸಾಕಾಗದೆ, ಸ್ವಿಗ್ಗಿ, ರ‍್ಯಾಪಿಡೊ ಸರಬರಾಜು ಮಾಡಿದೆ ಅದೂ ಪ್ರಯೋಜನ ಆಗದು ಎಂದು ಎಲ್ಲ ಕೆಲಸಕ್ಕೆ ಗುಡ್ ಬೈ ಹೇಳಿದೆ. ಆಟೊ ತೆಗೆದುಕೊಳ್ಳಲು ಸಿದ್ಧತೆ ಮಾಡಿಕೊಂಡೆ. ಬಹುತೇಕ ಪೋಷಕರಿಗೆ ತಮ್ಮ ಮಕ್ಕಳನ್ನು ಎಂಜಿನಿಯರ್ ಇಲ್ಲ ವೈದ್ಯರನ್ನು ಮಾಡಬೇಕಿರುತ್ತದೆ. ಅದೇ ಸಾಮಾಜಿಕ ಪ್ರತಿಷ್ಠೆ. ನನಗೆ ಇಂಗ್ಲಿಷ್ ಸಾಹಿತ್ಯದ ಮೇಲೆ ಒಲವಿತ್ತು.

ಸ್ವಾತಂತ್ರ್ಯ ಇಲ್ಲದ ಯಾವ ಕೆಲಸ ಮಾಡಬಾರದು. ನನಗೆ ಅನ್ನಿಸಿದ್ದನ್ನು ಮಾಡಬೇಕು. ಸಂವಿಧಾನ ನೀಡಿದ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಬಳಸಬೇಕು ಎನ್ನುವ ತವಕ ಹೆಚ್ಚಿತು. ಒಳ್ಳೆಯದನ್ನು ಮಾಡಲು ಅದರ ಮೌಲ್ಯವನ್ನೂ ಅರ್ಥ ಮಾಡಿಕೊಂಡಿರಬೇಕು. ಎದುರಾಗುವ ನಿರ್ಬಂಧದ ಎಲ್ಲೆಯನ್ನು ಮೀರಲು ಶುರುಮಾಡಿದೆ. ರೀಲ್ಸ್ ಹವ್ಯಾಸವನ್ನು ಆತ್ಮತೃಪ್ತಿಯಿಂದ ಮಾಡುತ್ತಿದ್ದೇನೆ. ಮೊದಲು ರೀಲ್ಸ್ ಗ್ರಾಹಕನಾಗಿ ನೋಡಿದ್ದನ್ನೇ ಪ್ರಯೋಗಕ್ಕೆ ಒಡ್ಡುತ್ತಿದ್ದೇನೆ. ಸದ್ಯ ಇದರಿಂದ ಆದಾಯ ಬಂದಿಲ್ಲ. ಬ್ರಾಂಡ್ ಡೀಲ್ ಬಂದಿವೆ. ಅದನ್ನು ಅಧ್ಯಯನ ಮಾಡಿ ಮಾಡಬೇಕು. ಫಾಲೋವರ್ಸ್‌ಗಳಿಗೆ ಅನ್ಯಾಯ ಮಾಡಬಾರದು. ಹಾಗಾಗಿ ಮೌಢ್ಯ ಬಿತ್ತುವ ಪ್ರಚಾರ ಮಾಡುವುದಿಲ್ಲ. ಯೂಟ್ಯೂಬ್ ಆಗಿದ್ದರೆ ದೀರ್ಘ ವಿಡಿಯೊ ಮಾಡಬಹುದಿತ್ತು. ಇನ್‌ಸ್ಟಾದಲ್ಲಿಯೇ ನಿಧಾನಕ್ಕೆ ತೆಗೆದುಕೊಂಡು ಹೋಗೋಣ ಅಂತ ಇದ್ದೇನೆ. ಇರುವ ಸಾಮರ್ಥ್ಯವನ್ನು ಹತ್ತು ಸೆಕೆಂಡ್‌ನಲ್ಲಿ ತೋರಿಸಬೇಕಿದೆ. ಮುಂದೆ ಸಿನಿಮಾ — ಟೀವಿಗಳಲ್ಲಿ ಅಭಿನಯಿಸುವ ಅಭಿಲಾಷೆ ಇದೆ. ಅದಕ್ಕಾಗಿ ಸಿದ್ಧತೆಯನ್ನೂ ಮಾಡಿಕೊಳ್ಳುತ್ತಿದ್ದೇನೆ.

ಮೊದಲು ಬೆಳಿಗ್ಗೆ ಯಾಕಾದ್ರೋ ಅನ್ನಿಸುತ್ತಿತ್ತು. ಈಗ ಖುಷಿಯಿಂದ ಎದ್ದೇಳುತ್ತೇನೆ. ಮಗಳ ಜೊತೆ ಅರ್ಥಪೂರ್ಣ ಸಮಯವನ್ನು ಕಳೆಯುತ್ತೇನೆ. ಮನಸು ಇದ್ದರೆ ಕೆಲಸ ಮಾಡುತ್ತೇನೆ. ದಿನದ ಖರ್ಚಿಗೆ ಹೇಗೋ ಸಂಪಾದನೆ ಆಗುತ್ತದೆ. ಒಟ್ಟಾರೆ ದೌರ್ಜನ್ಯ ಅವಮಾನಕ್ಕೆ ತುತ್ತಾದ ಸಂತ್ರಸ್ತರಿಗೆ ಸಾಂತ್ವನ ಹೇಳುವ ಮಾಧ್ಯಮ 'ರೀಲ್ಸ್' ಅಂದುಕೊಂಡಿದ್ದೇನೆ. ಇಂಗ್ಲಿಷ್‌ನಲ್ಲಿ ಮಾಡಿ ಬೇರೆ ಭಾಷೆಯಲ್ಲಿ ಭಾಷಾಂತರ ಮಾಡಲು ಅವಕಾಶ ಕೊಟ್ಟೆ. ಅಂಗ ಊನವನ್ನು ಹೀಯಾಳಿಸುವ ಪ್ರಕ್ರಿಯೆ ಜಾಗತಿಕವಾದದ್ದು. ಎಲ್ಲರಿಗೂ ತಲುಪಲಿ ಎಂದಷ್ಟೇ ಇಂಗ್ಲಿಷ್‌ನಲ್ಲಿ ಮಾಡಿದ್ದೇನೆ. ಮುಂದೆ ಕನ್ನಡದಲ್ಲೂ ಮಾಡುತ್ತೇನೆ.

ಕೊಂಡಿ: https://www.facebook.com/share/r/1NV81tPmsr/